ಜೈನ್ ಕಾಲೇಜ್, ಜಯನಗರ.

ದ್ವಿತೀಯ ಪಿ.ಯು.ಸಿ –ಮಾದರಿ ಪ್ರಶ್ನೆಪತ್ರಿಕೆ 01 – 2017

**ಸಮಯ : 3.15 ಗಂಟೆ** **ವಿಷಯ:– ಕನ್ನಡ** **ಅಂಕಗಳು–100**

**ಅ–ವಿಭಾಗ**

**I ಅ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ** **10x1=10**

1. ರಾವಣನ ಎದುರು ಪ್ರತ್ಯಕ್ಷವಾದ ವಿದ್ಯಾದೇವತೆ ಯಾರು?
2. ತತ್ವಜ್ಞಾನವನ್ನು ಕೇಳದವರಾರು?
3. ಮೊಮ್ಮಗಳು ಏನು ಮಾಡುತ್ತಿದ್ದಳು?
4. ಕವಯಿತ್ರಿ ಯಾರಲ್ಲಿ ಮೊರೆ ಇಡುತ್ತಾರೆ?
5. ಧಣಿಗಳ ಮನೆಯ ಪಕ್ಕದಲ್ಲಿ ಹರಿಯುತ್ತಿದ್ದ ಹೊಳೆ ಯಾವುದು?
6. ಕಲಾಂ ಅವರು ಯಾವ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿದ್ದರು?
7. ಲೇಖಕರು ಹೇಳುವ ಹಳ್ಳಿಯ ಹೋಟೆಲಿನ ಹೆಸರೇನು?
8. ನಿರೂಪಕರ ಕೊಡಲಿಯ ಆಕಾರ ಹೇಗಿತ್ತು?
9. ಆನೆ ಯಾರ ಅಂಗಡಿಯನ್ನು ದೂಡಿ ಬೀಳಿಸಿತು?
10. ಪುಟಯ್ಯ ಯಾರು?

**ಆ–ವಿಭಾಗ**

**II ಅ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ :** **4x2=8**

11. ಹೆಂಡತಿಯ ಹರಿಬಕ್ಕಾಗಿ ಗಂಡುಗೂಸು ಏನು ಮಾಡುತ್ತಾನೆ?
12. ಯಾರಿಗೆ ಷಡ್ರಸಾನ್ನವನಿಕ್ಕಿ ಉಪಯೋಗವಿಲ್ಲ? ಏಕೆ?
13. ಮಗು ಏನೇನು ಕಲಿಯಿತು?
14. ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ?
15. ಆತ್ಮಕ್ಕೆ ಕುಮಟು ಹತ್ತುವುದು ಎಂದರೇನು?

**ಆ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ :** **3x2=6**

16. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು?
17. ಕೈಗಾರಿಕೋದ್ಯಮಿಗಳಿಂದ ಕಾಡು ನಾಶವಾದುದು ಹೇಗೆ?
18. ಕಮಲ ಮೇಡಂ ವೈದ್ಯರ ಯಾವ ಸಲಹೆಯನ್ನು ರೂಢಿಸಿಕೊಂಡರು?
19. ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ ಯಾವುದು?

**ಇ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ :** **3x2=6**

20. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?
21. ಕಾಡಪ್ಪ ಶೆಟ್ಟರು ಯಾವ ವರ್ತಮಾನವನ್ನು ಮುಟ್ಟಿಸಿದರು?
22. ನಿರೂಪಕರು ಕ್ಯಾಲಿಕ್ಯುಲೇಟರಿನಲ್ಲಿ ಲೆಕ್ಕಮಾಡಿ ಜಬ್ಬಾರ್‌ಗೆ ಏನೆಂದರು?
23. ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?

**ಇ–ವಿಭಾಗ**

**III ಅ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:** **2x3=6**

24. ತಾನೆ ಲಘು ಮಾಡಿ ಲಘುವಾದನಯ್ಯ.
25. ಆಪತ್ತಿನೊಳ್ ಮಣಿದುಂ ನೋಡದ ಬಂಧುವೇತಕ್ಕೆ
26. ಜ್ಯೋತಿ ನಿನ್ಯಾರ ಹೋಲರ.

**ಆ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:** **1x3=3**

27. ಆಪರೇಷನ್ ಆಗಬೇಕು ಪರವಾಗಿಲ್ಲವಾ?
28. ಇದೇ ಲೋಟವಲ್ಲವೇ.... ತನ್ನ ಬೆವರಿನ ಬೆಲೆ ಕಳೆದದ್ದು.

**ಇ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:** **1x3=3**

29. ಅದನ್ನು ಸುತ್ತಿಗೆ ಎಂದು ಕರೆಯಬಹುದಿತ್ತು.
30. ಆನೆ ಜೊತೆ ಮಲಗುತ್ತೀಯಾ; ನೀನ್ಯಾವ ಗಂಡಸು.

## ಈ–ವಿಭಾಗ

**IV ಅ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 3x4=12**

31. ರಾವಣನು ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಂಡ ಸಂದರ್ಭವನ್ನು ವಿವರವಾಗಿ ಬರೆಯಿರಿ.
32. ತನಗಾದ ಅವಮಾನವನ್ನು ದ್ರೌಪದಿ ಭೀಮನಿಗೆ ಹೇಳಿಕೊಂಡ ಬಗೆಯನ್ನು ವಿವರಿಸಿ.
33. ನಗರ ಜೀವನದ ಯಾಂತ್ರಿಕ ವಿವರಗಳು ಕವಿತೆಯಲ್ಲಿ ಹೇಗೆ ಚಿತ್ರಣಗೊಂಡಿದೆ? ವಿವರಿಸಿ.
34. ಶಿಲುಬೆಗೇರಿದ ಜೀಸಸ್‌ನ ದೇಹ ಏನನ್ನು ಹೇಳುವಂತಿದೆ? ವಿವರಿಸಿ.

**ಆ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 2x4=8**

35. ಪೋಷಕರು ಖಾಸಗಿ ಶಾಲೆಗಳ ಕಡೆ ಹೊರಳಲು ಲೇಖಕರು ಯಾವ ಕಾರಣಗಳನ್ನು ಉದಾಹರಿಸುತ್ತಾರೆ?
36. ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ ಹೇಗೆ? ವಿವರಿಸಿ.
37. ಮುದ್ದಣ–ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿ.

**ಇ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 2x4=8**

38. ದುರ್ಗಪ್ಪ ನಿರೂಪಕರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿ.
39. ಎಲ್ಲರ ನಿರೀಕ್ಷೆ ಸುಳ್ಳಾಗುವಂತೆ ಕೃಷ್ಣೇಗೌಡ ಆನೆಯನ್ನು ಹೇಗೆ ಸಾಕಿದ.
40. ಪುಟ್ಟಯ್ಯ ತನ್ನ ಅಸಹಾಯಕತೆಯನ್ನು ಹೇಗೆ ವಿವರಿಸಿದ್ದಾನೆ?

## ಉ–ವಿಭಾಗ

**V ಅ. ಈ ಕೆಳಗಿನ ಪದ್ಯಗಳಿಗೆ ಭಾವಾರ್ಥ ಬರೆಯಿರಿ: 1x5=5**

41. ರಾವಣನ ರೂಪು ಸೀತಾ
ದೇವಿಗೆ ತೃಣಕಲ್ಪಮಾಯ್ತು ಪತಿಭಕ್ತಿಯೊಳಾ
ರೀ ವನಿತೆಯ ತೆಱದಿಂ ಸ
ದ್ಭಾವಮನೊಳಕೊಂಡ ಪುಣ್ಯವತಿಯರ್ ಸತಿಯರ್

42. ಮಂದೆಗೆಳೆಸಿದ ಪಾಪಿ ಕೌರವ
ನಂದು ಮುಂದಲೆವಿಡಿದು ಸೈಂಧವ
ಬಂದು ಬಳಿಕಾರಣ್ಯದೊಳೆನ್ನನೆಳದೊಯ್ದ
ಇಂದು ಕೀಚಕ ನಾಯ ಕಾಲಲಿ
ನೊಂದೆ ನಾನೀ ಮೂರು ಬಾರಿಯೆ
ಬಂದ ಭಂಗವೇ ಸಾಕೆನುತೆ ಬಸವಳಿದಳಿಂದುಮುಖಿ

**ಆ. ಭಾಷಾಭ್ಯಾಸ: ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ : 6x2=12**

43. **ಈ ಪದಗಳಿಗೆ ತತ್ಸಮ ತದ್ಭವ ಬರೆಯಿರಿ :** ಅಟವಿ, ವಿದ್ಯೆ
44. **ಈ ಪದಗಳಿಗೆ ನಾನಾರ್ಥ ಬರೆಯಿರಿ:** ಕಲಿ, ಹೊಳೆ
45. **ಈ ಕ್ರಿಯಾಪದಗಳ ಕಾಲ ತಿಳಿಸಿ** ಓಡಿದರು, ಬರುತ್ತಿದ್ದರು
46. **ಈ ಪದಗಳ ವಿಭಕ್ತಿ ಪ್ರತ್ಯಯವನ್ನು ಬರೆಯಿರಿ:** ಧರೆಯೊಳ್, ಬೆಳಗಿಂದ
47. **ಈ ದ್ವಿರುಕ್ತಿಗಳನ್ನು ಸ್ವಂತವಾಕ್ಯದಲ್ಲಿ ಬಳಸಿರಿ:** ಕಟ್ಟಕಡೆಗೆ, ಮೆಲ್ಲಮೆಲ್ಲನೆ.
48. **ಈ ಕೆಳಗಿನ ಪದಗಳಲ್ಲಿ ಅನ್ಯದೇಶ್ಯಗಳನ್ನು ಗುರ್ತಿಸಿ:**
ಹಾಲು, ರೈತ, ಮೈದಾನ, ಮೀನು, ಭರವಸೆ, ಸಾಬೂನು, ಮೊಸರು, ಸಾವಿರ
49. **ಯಾವುದಾದರೂ ಎರಡು ರೂಢನಾಮಗಳನ್ನು ಬರೆಯಿರಿ:**

**ಇ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಪ್ರಬಂಧ ಬರೆಯಿರಿ: 1x5=5**

50. ಕೃಷಿ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಅತ್ಯಗತ್ಯ.
51. ಐತಿಹಾಸಿಕ ಸ್ಥಳಗಳ ಸಂರಕ್ಷಣೆ.

**ಈ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಪತ್ರಲೇಖನ ಬರೆಯಿರಿ: 1x4=4**

52. ನಿಮ್ಮ ಹುಟ್ಟು ಹಬ್ಬಕ್ಕೆ ಆಹ್ವಾನಿಸಿ ನಿಮ್ಮ ಗೆಳೆಯ/ತಿಗೆ ಪತ್ರ ಬರೆಯಿರಿ.
53. ನಿಮ್ಮ ಬಡಾವಣೆಯ ಬೀದಿ ದೀಪಗಳ ದುರಸ್ಥಿ ಕುರಿತು ಬೆಸ್ಕಾಂನ ಅಭಿಯಂತರರಿಗೊಂದು ಪತ್ರ ಬರೆಯಿರಿ

**ಉ. ಈ ಕೆಳಗಿನ ಗಾದೆಗಳನ್ನು ವಿಸ್ತರಿಸಿ ಬರೆಯಿರಿ 1x4=4**

54. ದೇಶ ಸುತ್ತುಬೇಕು, ಕೋಶ ಓದಬೇಕು.
55. ಉತ್ಸಾಹವೇ ಯೌವನ, ಚಿಂತೆಯೇ ಮುಪ್ಪು

* * *